# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 233

ಸದಸ್ಯರ ಹೆಸರು : ಡಾ: ವೈ. ಎ. ನಾರಾಯಣಸ್ವಾಮಿ

ಉತ್ತರಿಸುವ ಸಚಿವರು : ತೋಟಗಾರಿಕೆ ಸಚಿವರು

ಉತ್ತರಿಸುವ ದಿನಾಂಕ : 10.12.2018

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ವಾರ್ಷಿಕ ಎಷ್ಟು ಪ್ರಮಾಣದ ಮಾವನ್ನು ಬೆಳೆಯಲಾಗುತ್ತದೆ. | ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ವಾರ್ಷಿಕ ಅಂದಾಜು 4.21 ಲಕ್ಷ ಮೆ.ಟನ್ ಮತ್ತು 1.29 ಮೆ.ಟನ್ ಕ್ರಮವಾಗಿ ಉತ್ಪಾದಿಸಲಾಗುತ್ತಿದ್ದು, ಒಟ್ಟಾರೆ 5.50 ಲಕ್ಷ ಮೆ.ಟನ್ ಗಳಷ್ಟು ಪ್ರಮಾಣದಲ್ಲಿ ಬೆಳೆಯಲಾಗುತ್ತದೆ. |
| ಆ) | ಬೆಲೆ ಏರಿಳಿತ ಮತ್ತು ಹವಾಮಾನ ವೈಪರಿತ್ಯಯಿಂದ ಮಾವು ಬೆಳೆಗೆ ಸರಿಯಾದ ಬೆಲೆ ಸಿಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಬಂದಿದ್ದಲ್ಲಿ, ಸರ್ಕಾರ ತೆಗೆದುಕೊಂಡ ಕ್ರಮವೇನು: | ಬಂದಿದೆ.<br>ಮಾವು ಬೆಳೆಗೆ ಸರಿಯಾದ ಬೆಲೆ ದೊರಕಿಸಲು ಈ ಕೆಳಕಂಡ ಕ್ರಮಗಳನ್ನು ಸರ್ಕಾರದ ವತಿಯಿಂದ ತೆಗೆದುಕೊಳ್ಳಲಾಗಿದೆ.<br>1. 2018 ನೇ ಮಾವು ಹಂಗಾಮಿನಲ್ಲಿ ಜೂನ್ – ಜುಲೈ ಮಾಹೆಯಲ್ಲಿ ತೀವ್ರ ಬೆಲೆ ಕುಸಿತ ಕಂಡು ಬಂದ ಹಿನ್ನೆಲೆಯಲ್ಲಿ ಎಪಿಎಂಸಿ ಪ್ರಾಂಗಣಗಳಲ್ಲಿ ಮಾರಾಟ ಬೆಲೆ ಸೇರಿದಂತೆ ಮಾವಿಗೆ ಪ್ರತಿ ಕೆ.ಜಿ. ಗೆ ಗರಿಷ್ಟ ರೂ.7.50 ಅಥವಾ ಗರಿಷ್ಟ ರೂ. 2.50 ಗಳು ಪ್ರತಿ ಕೆ.ಜಿ.ಗೆ ನೀಡಿ ಪ್ರೋತ್ಸಾಹಿಸಲಾಗಿದೆ.<br>2. ರಾಜ್ಯದಲ್ಲಿ ಮಾವಿನ ಹಣ್ಣಿನ ಸಂಸ್ಕರಣೆಗೆ ಖಾಸಗಿ/ವೈಯಕ್ತಿಕ ಫಲಾನುಭವಿಗಳಿಗೆ ಸಂಸ್ಕರಣಾ ಘಟಕ ಸ್ಥಾಪಿಸುವವರೆಗೆ ಪ್ರೋತ್ಸಾಹಿಸಲಾಗುವುದು.<br>3. ಈ ದಿಸೆಯಲ್ಲಿ ರಾಜ್ಯದಲ್ಲಿ ಸಂಸ್ಕರಣಾ ಘಟಕಗಳನ್ನು ಸ್ಥಾಪನೆಗೆ ಆಸಕ್ತರನ್ನು ಆಕರ್ಷಿಸಲು Expression of Interest (EOI) ಯನ್ನು ಕರೆಯಲಾಗಿದೆ.<br>4. ಮಾವು ಬೆಳೆಗಾರರಿಗೆ ಉತ್ತಮ ಗುಣಮಟ್ಟ ಮತ್ತು ಉತ್ಪಾದನೆಗೆ ಉತ್ತಮ ಕೃಷಿ ಪದ್ಧತಿ ಅಳವಡಿಸಿಕೊಳ್ಳಲು ತರಬೇತಿಗಳನ್ನು ಆಯೋಜಿಸಲಾಗುತ್ತಿದೆ.<br>5. ಸ್ಥಳೀಯ ಮತ್ತು ರಫ್ತು ಮಾರುಕಟ್ಟೆ ಉತ್ತೇಜಿಸಲು ಜಾಗತಿಕ ಉತ್ತಮ ಕೃಷಿ ಪದ್ಧತಿ (Global GAP) ಪ್ರಮಾಣ ಪತ್ರಗಳನ್ನು ಪಡೆಯಲು ಮಾವು ಬೆಳೆಗಾರರಿಗೆ ಪ್ರೋತ್ಸಾಹ ನೀಡಲಾಗುತ್ತಿದೆ.<br>6. ಬೆಳೆಗಾರರಿಂದ ಗ್ರಾಹಕರಿಗೆ ನೇರ ಮಾರುಕಟ್ಟೆ ಕಲ್ಪಿಸಲು ರಾಜ್ಯ/ಜಿಲ್ಲಾ ಮಟ್ಟದ ಮಾವು ಮೇಳಗಳನ್ನು ಆಯೋಜಿಸಲಾಗುತ್ತಿದೆ.<br>7. ಕೊಯ್ಲು ನಂತರ ಮತ್ತು ಸಾಗಾಣಿಕೆ ಹಂತದಲ್ಲಿ ಹಾನಿಯನ್ನು ತಡೆಗಟ್ಟುವ ಮೂಲಕ ಉತ್ತಮ ಬೆಲೆ ದೊರಕಿಸಿಕೊಡಲು ಮಾವು ಬೆಳೆಗಾರರಿಗೆ ಪ್ಲಾಸ್ಟಿಕ್ ಕ್ರೇಟ್ಸ್ ಮತ್ತು ಕಾರ್ಟೂನ್ ಬಾಕ್ಸ್ ಗಳನ್ನು ಖರೀದಿಸಲು ಸಹಾಯಧನ ನೀಡಲಾಗುತ್ತಿದೆ. |

| | | |
|---|---|---|
| ಇ) | ರೈತರು ಬೆಳೆದಂತಹ ಮಾವು ಬೆಳೆಯನ್ನು ಶೇಖರಣೆ ಮಾಡಲು ಜಿಲ್ಲೆಯಲ್ಲಿರುವ ಸರ್ಕಾರಿ ಶೀತಲೀಕರಣ ಕೇಂದ್ರಗಳ ಬಗ್ಗೆ ವಿವರಗಳನ್ನು ನೀಡುವುದು. | ರೈತರು ಬೆಳೆದಂತಹ ಮಾವು ಮತ್ತು ಇತರ ಉತ್ಪನ್ನಗಳನ್ನು ಶೇಖರಣೆ ಮಾಡಲು ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ತಲಾ ಒಂದು ಸರ್ಕಾರಿ ಶೀತಲೀಕರಣ ಕೇಂದ್ರಗಳಿದ್ದು, ಪ್ರಸ್ತುತ ಸ್ಥಗಿತಗೊಂಡಿರುವ ಇವುಗಳನ್ನು ಪುನಃ ಆರಂಭಿಸಲು ಖಾಸಗಿ ಕ್ಷೇತ್ರದಿಂದ ಆಸಕ್ತರನ್ನು ಆಕರ್ಷಿಸಲು (Expression of Interest) ಕ್ರಮವಹಿಸಲಾಗುತ್ತಿದೆ. |
| ಈ) | ಕೋಲಾರ ಜಿಲ್ಲೆಯ ಮಾವು ಬೆಳೆಗಾರರ ಬಹುದಿನಗಳ ಬೇಡಿಕೆಯಾದ ಸಂಸ್ಕರಣಾ ಘಟಕಗಳನ್ನು ಸ್ಥಾಪನೆ ಮಾಡುವ ಬಗ್ಗೆ ಸರ್ಕಾರದ ನಿಲುವೇನು? | 1. ಕೋಲಾರ ಜಿಲ್ಲೆಯು ಸೇರಿದಂತೆ ರಾಜ್ಯದಲ್ಲಿ ಮಾವು ಮತ್ತು ಬಹು ಉತ್ಪನ್ನಗಳ ಸಂಸ್ಕರಣೆಗೆ (Multi product processing) ಘಟಕಗಳನ್ನು ಸ್ಥಾಪಿಸಲು ತಾಂತ್ರಿಕ ಆಧಾರಿತ ಕಾರ್ಯಸಾಧ್ಯತೆ (Techno economical feasibility) ಯೋಜನಾ ಪ್ರಸ್ತಾವನೆ ತಯಾರಿಸಲು NABARD ಅಂಗ ಸಂಸ್ಥೆಯಾದ NABACONS ರವರಿಗೆ ಈ ಕುರಿತಂತೆ KTTP ನಿಯಮಗಳ 4G ವಿನಾಯಿತಿ ಪಡೆದು ಕಾರ್ಯಾದೇಶ ನೀಡಲಾಗಿದೆ.<br>2. ಕೋಲಾರ ಜಿಲ್ಲೆಯು ಸೇರಿದಂತೆ ಮಾವು ಮತ್ತು ಇತರ ಬಹು ಉತ್ಪನ್ನಗಳ(Multi product processing) ಸಂಸ್ಕರಣಾ ಘಟಕ ಸ್ಥಾಪಿಸಲು ಆಸಕ್ತರನ್ನು ಆಕರ್ಷಿಸಲು Expression of Interest (EOI) ಯನ್ನು ಕರೆಯಲಾಗಿದೆ.<br>3. ರಾಜ್ಯದಲ್ಲಿ ಸಂಸ್ಕರಣಾ ಘಟಕ ಸ್ಥಾಪಿಸುವ ಸಂಬಂಧಿಸಿದಂತೆ ಸರ್ಕಾರಕ್ಕೆ ವರದಿ/ಪ್ರಸ್ತಾವನೆ ಸಲ್ಲಿಸಲು ಉನ್ನತ ಮಟ್ಟದ ತಾಂತ್ರಿಕ ಸಮಿತಿಯನ್ನು ರಚಿಸಲಾಗಿದೆ. |

ಸಂಖ್ಯೆ: ತೋಇ 368 ತೋಇವಿ 2018

(ಎಂ.ಸಿ.ಮನಗೂಳಿ)

**ತೋಟಗಾರಿಕೆ ಸಚಿವರು**

(ಎಂ.ಸಿ. ಮನಗೂಳಿ)

ತೋಟಗಾರಿಕೆ ಸಚಿವರು